**<u>ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ</u>**

***<u>ಸಿ.ಸಿ.ನಂ.464/2025</u>***

**ಫಿರ್ಯಾಧಿದಾರಃ** ಕರ್ನಾಟಕ ಸರ್ಕಾರದ ಪರವಾಗಿ ಅಬಕಾರಿ ಪೋಲಿಸ

// ವಿರುದ್ದ //

**ಆರೋಪಿತರು:** **1.** ರಾಘವೇಂದ್ರ ಮತ್ತು ಇನ್ನೋಬ್ಬ

<u>ದೋ ಷಾ ರೋ ಪ ಣೆ</u>

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿ

| | |
|---|---|
| 1. | ರಾಘವೆಂದ್ರ ತಂದೆ ಅಂತಪ್ಪ, 43 ವರ್ಷ,<br>ಉಃ ಒಕ್ಕಲುತನ, ವಾಸಃ ಗರಗಪಳ್ಳಿ. |
| 2. | ಡೇವಿಡ ತಂದೆ ಬಸಪ್ಪ, 65 ವರ್ಷ,<br>ಉಃ ಒಕ್ಕಲುತನ, ವಾಸಃ ಗರಗಪಳ್ಳಿ. |

**<u>ಆದ ನಿಮ್ಮ ವಿರುದ್ದ ದೋಷಿಸುವ ದೋಷಾರೋಪಣೆ ಎನೆಂದರೆ,</u>**

ದಿನಾಂಕಃ 15-04-2024 ರಂದು ಮಧ್ಯಹ್ನ 12-15 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಸುಲೆಪೇಟ ನಿಂದ ದಸ್ತಾಪುರ ಹೋಗುವ ಮುಖ್ಯ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಆರೋಪಿ ನೀವು ಯಾವುದೇ ಅಧಿಕೃತ ಪರವಾನಿಗೆ ಪಡೆಯದೆ ಅನಧಿಕೃತವಾಗಿ ಕಾನೂನು ಬಾಹಿರವಾಗಿ 90 m.l ನ 30 Original Choice Tetra ಪೌಚಗಳು ಮತ್ತು 650 m.l ನ 12 Kind Fisher Bear ಬಾಟಲಗಳು ಮದ್ಯ ಸಾಗಾಟ ಮಾಡುತ್ತಿದ್ದ ಕಾರಣ ಆರೋಪಿ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾಹರ್ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನೀವು ಮದ್ಯವನ್ನು ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪರವಾನಗಿ/ಅನುಮತಿಯನ್ನು ಪಡೆಯಡದೆ ನಿಗದಿತ ಪ್ರಮಾಣವನ್ನು ಮೀರಿದ ಮದ್ಯವನ್ನು ಪರವಾನಗೆ ಇಲ್ಲದೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಟ ಮಾಡುವ ಕಾರಣ, ಆರೋಪಿ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 04.08.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.